

ಕರ್ನಾಟಕ ಸರ್ಕಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಚಿಕ್ಕಮಗಳೂರು,

# 2021-22

# ಪರ್ಯಾಯ ಶೈಕ್ಷಣಿಕ ಯೋಜನೆ

ವಿಷಯ:- ಕನ್ನಡ

ತರಗತಿ:-5ನೇ ತರಗತಿ

ರಚನೆಗೆ ಸಹಕಾರ:- ನ.ರಾ.ಪುರ. ಶೈಕ್ಷಣಿಕ ವಲಯ

ಪರಿಕಲ್ಪನೆ ಮತ್ತು ಮಾರ್ಗದರ್ಶನ

ಪ್ರಾಂಶುಪಾಲರು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ

ರಾಮನಹಳ್ಳಿ, ಚಿಕ್ಕಮಗಳೂರು

Design by Sathyaprakash R M Art Teacher

# ಪರಿವಿಡಿ

| ಕ್ರ. ಸಂ. | ಅಧ್ಯಾಯಗಳು | ಪುಟ ಸಂಖ್ಯೆ |
|---|---|---|
| 01. | * ಒಟ್ಟಿಗೆ ಬಾಳುವ ಆನಂದ | 3–5 |
| 02. | * ಸ್ವಾತಂತ್ರ್ಯದ ಹಣತೆ<br>* ಬೇವು ಬೆಲ್ಲದೊಳಿಡಲೇನು ಫಲ | 6–8 |
| 03. | * ವಚನಗಳು | 9–11 |
| 04. | * ನದಿಯ ಆಳಲು<br>* ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ | 12–15 |
| 05. | * ಹುತ್ತರಿ ಹಾಡು | 16–18 |
| 06. | * ಪಂಜರಶಾಲೆ | 19–21 |

DIET C

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

ತರಗತಿ– 5. **ಅಭ್ಯಾಸದ ಹಾಳೆ–1 ಕಲಿಕಾಂಶ ಚಟುವಟಿಕೆ** ವಿಷಯ – ಕನ್ನಡ.

## ಪಾಠ :1. ಒಟ್ಟಿಗೆ ಬಾಳುವ ಆನಂದ

**ಸೂಚನೆಗಳು:**
* ಪಾಠವನ್ನು ಸ್ವರಭಾರಯುಕ್ತವಾಗಿ ಗಟ್ಟಿಯಾಗಿ ಓದುವುದು.
* ಸಂಭಾಷಣೆಯಲ್ಲಿನ ವಾಕ್ಯಗಳನ್ನು ಮತ್ತೆ ಮತ್ತೆ ಓದುವುದು.
* ಹಿರಿಯರ ಸಹಾಯದಿಂದ ಸಹಕಾರ ಮತ್ತು ಸಂರಕ್ಷಣೆ ಮೌಲ್ಯದ ಬಗ್ಗೆ ತಿಳಿಯುವುದು.
* ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ಕೈಗೊಳ್ಳುವುದು.
* ಇತರ ಮಾಧ್ಯಮಗಳಲ್ಲಿನ ಮೌಲ್ಯಭರಿತ ಕಥೆಗಳನ್ನು ಅವಲೋಕಿಸುವುದು.
* ಗೆಳೆಯರೊಂದಿಗೆ ಚಿಕ್ಕ ಚಿಕ್ಕ ಕತೆಗಳನ್ನು ಓದುವುದು.
* ಪಠ್ಯ ಪುಸ್ತಕಲ್ಲಿನ ಒಟ್ಟಿಗೆ ಬಾಳು ಆನಂದ ಮತ್ತು ನದಿಯ ಅಳಲು ಪಠ್ಯ ಭಾಗವನ್ನು ತಪ್ಪಿಲ್ಲದಂತೆ ಗಟ್ಟಿಯಾಗಿ ಓದುವುದು.
* ನೀಡಿರುವ ಕ್ಯೂ.ಆರ್.ಕೋಡ್/ಲಿಂಕ್‌ನಲ್ಲಿ ಈಗಾಗಲೇ ಹಾಡಿರುವ ಪದ್ಯವನ್ನು ಆಲಿಸುವುದು.

**ಪದಗಳ ಅರ್ಥ:**

ಕಂಟಕ – ಕೇಡು, ವಿಪತ್ತು ವಿಭೂತಿ– ಭಸ್ಮ, ಬೂದಿ

| | |
|---|---|
| ಜಂಬ – ಗರ್ವ, ಒಣ ಆಡಂಬರ | ಜಗಳ - ಕಲಹ |
| ನೇಗಿಲು – ಭೂಮಿಯನ್ನು ಉಳುವ ಸಾಧನ | ಸಂಕುಲ – ಸಮೂಹ, ಗುಂಪು |
| ಹಿಕ್ಕೆ – ಹಕ್ಕಿಗಳ ಮಲ | ಅನಾಹುತ– ತೊಂದರೆ, ಅಪಾಯ |
| ಧುತ್ತನೆ _ ಏಕಾಏಕಿ, ಇದ್ದಕ್ಕಿದಂತೆ | ತಾಕೀತು - ಕಟ್ಟಪ್ಪಣೆ, ಎಚ್ಚರಿಕೆ |

**ಸ್ವಂತ ವಾಕ್ಯ ರಚನೆ:**

**ಮಾದರಿ–**1. ನೇಗಿಲು : ರೈತರು ಭೂಮಿಯನ್ನು ಉಳಲು ನೇಗಿಲನ್ನು ಬಳಸುತ್ತಾರೆ.
2. ಅನಾಹುತ : ______________________
3. ಸಂಕುಲ : ______________________
4. ಜಂಬ : ______________________

**ವ್ಯಾಕರಣಾಂಶ:**

### ವರ್ಣಮಾಲೆ ಮತ್ತು ಸಂಯುಕ್ತಾಕ್ಷರಗಳು:

ವ್ಯಂಜನಕ್ಕೆ ವ್ಯಂಜನ ಸೇರಿಕೊಂಡು (ಸ್ವರದ ಸಹಾಯದಿಂದ) ಉಂಟಾಗುವ ಅಕ್ಷರಕ್ಕೆ ಸಂಯುಕ್ತಾಕ್ಷರ ಅಥವಾ ಒತ್ತಕ್ಷರ ಎಂದು ಕರೆಯುವರು

ಸಂಯುಕ್ತಾಕ್ಷರಗಳಲ್ಲಿ ಎರಡು ವಿಭಾಗಗಳಿವೆ.

1. ಸಜಾತೀಯ ಸಂಯುಕ್ತಾಕ್ಷರಗಳು 2. ವಿಜಾತಿ ಸಂಯುಕ್ತಾಕ್ಷರಗಳು

ಒಂದೇ ಜಾತಿಯ ಎರಡು ವ್ಯಂಜನಗಳು (ಸ್ವರದ ಸಹಾಯದಿಂದ) ಒಂದಕ್ಕೊಂದು ಸೇರಿದರೆ ಸಜಾತೀಯ ಸಂಯುಕ್ತಾಕ್ಷರಗಳಾಗುವುವು?

ಉದಾ: ಅ+ಕ್+ಕ್+ಅ=ಅಕ್ಕ.

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪಠ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.
* ವ್ಯಾಕರಣಾಂಶದ ಹೆಚ್ಚಿನ ಮಾಹಿತಿಗಾಗಿ ಅಭ್ಯಾಸ ಪುಸ್ತಕವನ್ನು ಬಳಸುವುದು.

DIET CHIKMAGALORE

## ಪಾಠ :1. ಒಟ್ಟಿಗೆ ಬಾಳುವ ಆನಂದ

### ಅ) ಹೊಂದಿಸಿ ಬರೆಯಿರಿ:

| ಅ ಪಟ್ಟಿ | ಬ ಪಟ್ಟಿ |
|---|---|
| 1) ಹ್ರಸ್ವಸ್ವರ | ಲ ______ |
| 2) ಯೋಗವಾಹ | ಣ ______ |
| 3) ಅನುನಾಸಿಕ | ಅಃ ______ |
| 4) ಅವರ್ಗೀಯ | ಅ ______ |

### ಆ) ಬಿಟ್ಟ ಸ್ಥಳ ಭರ್ತಿ ಮಾಡಿರಿ:

ಕನ್ನಡ ವರ್ಣಮಾಲೆ

| ಸ್ವರಾಕ್ಷರಗಳ ಸಂಖ್ಯೆ | ವ್ಯಂಜನಗಳ ಸಂಖ್ಯೆ | ಯೋಗವಾಹಗಳ ಸಂಖ್ಯೆ |
|---|---|---|
| | | |

1. **ಹ್ರಸ್ವಸ್ವರಗಳು** = 6 – ______________________

2. **ದೀರ್ಘಸ್ವರಗಳು** = 7 – ______________________

3. **ಯೋಗವಾಹಗಳು**

| | |
|---|---|
| ಅನುಸ್ವಾರ | |
| ವಿಸರ್ಗ | |

**ವರ್ಗೀಯ ವ್ಯಂಜನಾಕ್ಷರಗಳು:**

| ಅಲ್ಪಪ್ರಾಣ | ಮಹಾಪ್ರಾಣ | ಅಲ್ಪಪ್ರಾಣ | ಮಹಾಪ್ರಾಣ | ಅನುನಾಸಿಕ |
|---|---|---|---|---|
| ಕ್ | | | | |
| ಚ್ | | | | |
| ಟ್ | | | | |
| ತ್ | | | | |
| ಪ್ | | | | |

**ಅವರ್ಗೀಯ ವ್ಯಂಜನಾಕ್ಷರಗಳು:**

| | | | | | | | | |
|---|---|---|---|---|---|---|---|---|
| ಯ್ | | | ವ್ | | | ಸ್ | | ಳ್ |

ಇ) ಕೆಳಗೆ ಕೊಟ್ಟಿರುವ ಸಂಯುಕ್ತಾಕ್ಷರಗಳಲ್ಲಿ ಸಜಾತೀಯ, ವಿಜಾತೀಯ ಸಂಯುಕ್ತಾಕ್ಷರಗಳನ್ನಾಗಿ ವಿಂಗಡಿಸಿ ಬರೆಯಿರಿ.

**ಕ್ಕ ಪ್ತ ಸ್ವ ರ್ರ ಜ್ಜ ಸ್ವ ಸ್ಥ ಯ್ಯ ಡ್ಗ ಮ್ಮ**

ಸಜಾತೀಯ ಸಂಯುಕ್ತಾಕ್ಷರ – ______________________

ವಿಜಾತೀಯ ಸಂಯುಕ್ತಾಕ್ಷರ – ______________________

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪಠ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

ತರಗತಿ– 5. **ಅಭ್ಯಾಸದ ಹಾಳೆ–3 ಮೌಲ್ಯಮಾಪನ ಚಟುವಟಿಕೆ** ವಿಷಯ – ಕನ್ನಡ.

## ಪಾಠ :1. ಒಟ್ಟಿಗೆ ಬಾಳುವ ಆನಂದ

### ಅ) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

1) ಗುಂಡನೆಯ ಕಲ್ಲು ಎಲ್ಲಿತ್ತು?

___________________________________________

2) ಸ್ವರಗಳು ಎಂದರೇನು?

___________________________________________

3) ಬೇವಿನ ಮರ ಮತ್ತು ಅಮ್ಮನ ಕಲ್ಲು ಮತ್ತೆ ಹೇಗೆ ಸ್ನೇಹಿತರಾದವು?

___________________________________________

___________________________________________

___________________________________________

### ಆ) ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿರಿ:

1. ನಾವಿಬ್ಬರೂ ಒಬ್ಬರಿಂದ ಒಬ್ಬರು ____________ ಜನರು ನಮ್ಮಿಬ್ಬರನ್ನೂ ನಾಶ ಮಾಡುತ್ತಾರೆ.
2. ಎಲ್ಲರೂ _______ ಬಾಳಿದರೆ, ಎಲ್ಲರೂ _________ ಇರುವುದು.

### ಇ) ಯೋಜನೆ:

1. ಯುಟ್ಯೂಬ್ ಲಿಂಕ್ ಬಳಸಿ ಸಂವೇದ ಕಾರ್ಯಕ್ರಮದಲ್ಲಿ ಪ್ರಸಾರವಾದ ಈ ಗದ್ಯವನ್ನು ಭಾಗವನ್ನು ವೀಕ್ಷಿಸಿ. ಕಥಾ ರೂಪದಲ್ಲಿ ಹೇಳಿ, ಲಭ್ಯವಿದ್ದಲ್ಲಿ ವಾಟ್ಸಾಪ್ ಮೂಲಕ ರೆಕಾರ್ಡ್ ಮಾಡಿ ಕಳುಹಿಸಿ.
2. ದಿನ ಪತ್ರಿಕೆಯಲ್ಲಿ ಬರುವ ಮಕ್ಕಳ ಕಥೆಯನ್ನು ಸಂಗ್ರಹಿಸು.

### ಈ) ಒಗ್ಗಟಿನಲ್ಲಿ ಬಲವಿದೆ ಈ ಕಥೆಗೆ ಪೂರಕವಾದ ಕಥೆ ರಚಿಸಿ:

**ಉದಾ:**–* ಬಲೆಗೆ ಸಿಕ್ಕಿ ಬಿದ್ದ ಪಾರಿವಾಳ(ಯೂಟ್ಯೂಬ್ ಲಿಂಕ್ ಬಳಸಿ)
* ಮಂಗ ಮತ್ತು ಬೆಕ್ಕು

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪಠ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

ತರಗತಿ– 5 **ಅಭ್ಯಾಸದ ಹಾಳೆ–1 ಕಲಿಕಾಂಶ ಚಟುವಟಿಕೆ** ವಿಷಯ – ಕನ್ನಡ.

**ಪಾಠ: 2. ಸ್ವಾತಂತ್ರ್ಯದ ಹಣತೆ** **ಪಾಠ: 6. ಬೇವು ಬೆಲ್ಲದೊಳಿಡಲೇನು ಫಲ**

ಸ್ವಾತಂತ್ರದ ಹಣತೆ

ಬೇವು ಬೆಲ್ಲದೊಳಿಡಲೇನು ಫಲ?

**ಸೂಚನೆಗಳು:**
* ಪದ್ಯವನ್ನು ಸ್ಪಷ್ಟವಾಗಿ ಓದಿ ಗಟ್ಟಿಯಾಗಿ ಹಾಡುವುದು.
* ಹೊಸ ಪದಗಳಿಗೆ ಅಡಿಗೆರೆ ಹಾಕುವುದು.
* ಪದಗಳ ಅರ್ಥವನ್ನು ಶಬ್ಧಕೋಶದಲ್ಲಿ ಹುಡುಕಿ ಅರ್ಥೈಸಿಕೊಳ್ಳುವುದು.
* ಮನೆಯ ಹಿರಿಯರ ಸಹಾಯ ಪಡೆದು ಪದ್ಯ ಭಾಗವನ್ನು ಸ್ವಂತ ರಾಗದಲ್ಲಿ ಹಾಡುವುದು.
* ಸೂಚನೆ ಅನುಸರಿಸಿ ಚಟುವಟಿಕೆ ಕೈಗೊಳ್ಳುವುದು.
* ನೀಡಿರುವ ಕ್ಯೂ.ಆರ್.ಕೋಡ್/ ಲಿಂಕ್‌ನಲ್ಲಿ ಈಗಾಗಲೇ ಹಾಡಿರುವ ಪದ್ಯವನ್ನು ಆಲಿಸುವುದು.
* ಪಠ್ಯಪುಸ್ತಕದಲ್ಲಿನ **'ಸ್ವಾತಂತ್ರ್ಯದ ಹಣತೆ'** ಹಾಗೂ **'ಬೇವುಬೆಲ್ಲದೊಳಿಡಲೇನು ಫಲ?'** ಪದ್ಯ ಭಾಗವನ್ನು ಓದಿ ಹಾಡಿ ಆನಂದಿಸಿ ಅರ್ಥೈಸಿಕೊಳ್ಳುವುದು.

**ಅ) ಓದಿ–ತಿಳಿ:**

1. ಅರಿವೆ – ಬಟ್ಟೆ
2. ಕುಟಿಲ – ಮೋಸ, ವಂಚನೆ
3. ಕುಪಿತ – ಸಿಟ್ಟಿನಿಂದ ಕೂಡಿದ
4. ಬೆಸೆ - ಒಂದಾಗುವುದು
5. ಘನತೆ – ಶ್ರೇಷ್ಠತೆ

**ಆ) ಸ್ವಂತ ವಾಕ್ಯ ರಚನೆ:**

**ಮಾದರಿ:** ಬೆಸೆ : ಒಳ್ಳೆಯ ಮಾತುಗಳು ಸ್ನೇಹವನ್ನು ಬೆಸೆಯುತ್ತದೆ.

ಕುಟಿಲ : ______________________________

ಘನತೆ :______________________________

**ಇ) ಲಿಂಗಗಳ ಪರಿಚಯ:**

ಪುಲ್ಲಿಂಗ :– ಗಂಡಸು ಎಂಬ ಅರ್ಥದಿಂದ ಬಳಸುವ ಪದಗಳು.
ಉದಾ: ರಾಮ.

ಸ್ತ್ರೀಲಿಂಗ :– ಹೆಂಗಸು ಎಂಬ ಅರ್ಥದಿಂದ ಬಳಸುವ ಪದಗಳು.
ಉದಾ: ಸೀತೆ.

ನಪುಂಸಕ ಲಿಂಗ :– ಗಂಡಸು ಅಥವಾ ಹೆಂಗಸು ಎಂಬ ಅರ್ಥದಿಂದ ಬಳಕೆಯಾಗದ ಪದಗಳು.
ಉದಾ: ಗಿಳಿ, ಹಣ್ಣು.

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

# ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ

ತರಗತಿ– 5. | ಅಭ್ಯಾಸದ ಹಾಳೆ–2 ಪುನರ್ಬಲನ ಚಟುವಟಿಕೆಗಳು | ವಿಷಯ – ಕನ್ನಡ.

**ಪಾಠ: 2. ಸ್ವಾತಂತ್ರ್ಯದ ಹಣತೆ** **ಪಾಠ: 6. ಬೇವು ಬೆಲ್ಲದೊಳಿಡಲೇನು ಫಲ**

**ಅ) ಕೆಳಗಿನ ಪದಗಳ ಅರ್ಥ ಬರೆಯಿರಿ:**

1) ತೈಲ – ____________
2) ಹಣತೆ – ____________
3) ತನು – ____________
4) ಹೀನ – ____________

**ಆ) ಪ್ರಾಸ ಪದಗಳನ್ನು ಗಟ್ಟಿಯಾಗಿ ಉಚ್ಚರಿಸುತ್ತಾ ಬರೆಯಿರಿ:**

ಉದಾ : ಹಣತೆ : ಜನತೆ, ಘನತೆ

1. ಮುಕ್ತಿ : _______ _______ 2. ಗಳಿಕೆ : _______ _______
3. ಗಮನ : _______ _______

**ಇ) ಪಠ್ಯಪುಸ್ತಕದಲ್ಲಿನ ಸ್ವಾತಂತ್ರ್ಯದ ಹಣತೆ ಹಾಗೂ ಬೇವು ಬೆಲ್ಲದೊಳಿಡಲೇನು ಫಲ? ಪದ್ಯ ಭಾಗವನ್ನು ಓದಿ ಸಾರಾಂಶವನ್ನು ಬರೆಯಿರಿ:**

____________________________________________
____________________________________________
____________________________________________
____________________________________________
____________________________________________
____________________________________________

**ಈ) ಪದ್ಯದ ಯಾವುದಾದರೂ 5 ಸಾಲುಗಳನ್ನು ಆರಿಸಿ ತಪ್ಪಿಲ್ಲದಂತೆ ದುಂಡಾಗಿ ಬರೆದು ಓದಿ:**

1.____________________________________________
2.____________________________________________
3.____________________________________________
4.____________________________________________
5.____________________________________________

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

# ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ

ತರಗತಿ– 5. **ಅಭ್ಯಾಸದ ಹಾಳೆ–3 ಮೌಲ್ಯಮಾಪನ ಚಟುವಟಿಕೆ** ವಿಷಯ – ಕನ್ನಡ.

**ಪಾಠ: 2. ಸ್ವಾತಂತ್ರ್ಯದ ಹಣತೆ ಪಾಠ: 6. ಬೇವುಬೆಲ್ಲದೊಳಿಡಲೇನು ಫಲ**

**1) ಈ ಪ್ರಶ್ನೆಗಳಿಗೆ ಉತ್ತರಿಸಿ:**

ಅ) ಸ್ವಾತಂತ್ರ್ಯದ ಹಣತೆಯನ್ನು ಯಾರು ಉರಿಸಬೇಕು?

______________________________

ಆ) ಸ್ವಾತಂತ್ರ್ಯದ ಗಳಿಕೆ ಹೇಗೆ ಆಗುತ್ತದೆ?

______________________________

ಇ) ನಮ್ಮ ಗಮನ ಯಾವುದರ ಕಡೆಗೆ ಸಲ್ಲಬೇಕು?

______________________________

ಈ) ಕೀರ್ತನಕಾರರು **'ಹಾವಿಗೆ ಹಾಲೆರೆದೇನು ಫಲ'** ಎಂದು ಏಕೆ ಹೇಳಿದ್ದಾರೆ?

______________________________

ಇ) ಮಂತ್ರ ಪಠನೆಯ ಫಲ ಸಿಗಬೇಕೆಂದರೆ ಮನುಜ ಏನನ್ನು ಬಿಡಬೇಕು?

______________________________

**2) ಈ ಪದ್ಯಭಾಗವನ್ನು ಪೂರ್ಣಗೊಳಿಸಿ:**

ಸ್ವಾತಂತ್ರ್ಯದ ಜೊತೆಗೆ______________ ಹೀನ ಗುಣಗಳ ______________

______________ ______________

______________ ______________

______________ಪಾಯವುಂಟು ಗೃಹಕೆ ______________ಮಾಡಿದರೇನು ಫಲ.

**3) ಅನ್ಯಲಿಂಗ ಪದ ಬರೆಯಿರಿ:**

ಅ. ಗೌಡತಿ – ಇ. ಅವಳು –

ಆ. ರಾಜ – ಈ. ಗಂಡಸು –

**4) ಕೆಳಗೆ ನೀಡಿದ ಪದಗಳಲ್ಲಿ ಸ್ತ್ರೀಲಿಂಗ, ಪುಲ್ಲಿಂಗ, ನಪುಂಸಕಲಿಂಗ ಸೂಚಕ ಪದಗಳನ್ನು ಆರಿಸಿ ಬರೆಯಿರಿ:**

**ನವಿಲು, ಗೆಳತಿ, ಹಣ್ಣು, ಸೋದರ, ತಾತ, ಮೊಸಳೆ, ಶರಣ, ತಾಯಿ,**

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕ ಲಿಂಗ |
|---|---|---|
| * | * | * |
| * | * | * |
| * | * | * |

**5) ವಿರುದ್ಧಾರ್ಥಕ ಪದಗಳನ್ನು ಹೊಂದಿಸಿ ಬರೆಯಿರಿ:**

1. ಅನುಭವ – ನಿಗರ್ವಿ
2. ಅಧಮ – ಅವನತಿ
3. ಉನ್ನತಿ – ಉತ್ತಮ
4. ಗರ್ವಿ – ಅನಾನುಕೂಲ
5. ಶುದ್ಧ – ಅನನುಭವ
6. ಅನುಕೂಲ – ವಿಫಲ
7. ಸಫಲ – ಅಶುದ್ಧ

**ಉದಾಹರಣೆ:** 1. ಅನುಭವ X ಅನನುಭವ

2. __________ X __________
3. __________ X __________
4. __________ X __________
5. __________ X __________
6. __________ X __________
7. __________ X __________

6) **ಯೋಜನೆ:** * **ಕನ್ನಡ ಕವಿಗಳ ಇತರ ಪದ್ಯಗಳನ್ನು ಸಂಗ್ರಹಿಸಿ, ಓದಿ, ಆನಂದಿಸಿ.**

* **ದೇಶಭಕ್ತಿ ಗೀತೆಗಳನ್ನು ಸಂಗ್ರಹಿಸಿ ಬರೆದು ರಾಗವಾಗಿ ಹಾಡಿ.**

DIET CHIKMAGALORE

## ಪ್ರಾಂಶುಪಾಲರು, ಡಯಟ್ ಹಾಗೂ ಉಪನಿರ್ದೇಶಕರು(ಅಭಿವೃದ್ಧಿ)ರವರ ಕಾರ್ಯಾಲಯ–ಚಿಕ್ಕಮಗಳೂರು

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

ತರಗತಿ– 5. **ಅಭ್ಯಾಸದ ಹಾಳೆ–1 ಕಲಿಕಾಂಶ ಚಟುವಟಿಕೆ** ವಿಷಯ – ಕನ್ನಡ.

**ಪಾಠ: 3. ವಚನಗಳು**

**ಸೂಚನೆಗಳು:–**

* ಪದ್ಯವನ್ನು ಮೊದಲು ಸ್ಪಷ್ಟವಾಗಿ ಓದುವುದು.
* ಪದಗಳನ್ನು ಓದಿ ಅರ್ಥಮಾಡಿಕೊಳ್ಳುವುದು.
* ಹೊಸ ಪದಗಳನ್ನು ಲಭ್ಯ ಅರ್ಥಕೋಶ(ಡಿಕ್ಷನರಿ)ದಲ್ಲಿ ಪತ್ತೆ ಹಚ್ಚುವುದು.
* ವಚನಗಳನ್ನು ತನ್ನದೇ ದಾಟಿಯಲ್ಲಿ ಹಾಡುವುದು
* ನೀಡಿರುವ ಕ್ಯೂ.ಆರ್.ಕೋಡ್/ ಲಿಂಕ್‌ನಲ್ಲಿ ಈಗಾಗಲೇ ಹಾಡಿರುವ ಪದ್ಯವನ್ನು ಆಲಿಸುವುದು.
* ಪಠ್ಯಪುಸ್ತಕದ **'ವಚನಗಳು'** ಕಲಿಕಾಂಶದ ಭಾಗವನ್ನು ಓದಿ ಬರೆದು ಅಭ್ಯಾಸ ಮಾಡುವುದು.

**ಪದಗಳ ಅರ್ಥ:**

* ಅರಿವು– ತಿಳುವಳಿಕೆ, ಜ್ಞಾನ
* ದ್ರವ್ಯ – ಐಶ್ವರ್ಯ, ಸಂಪತ್ತು
* ಗರ್ವ – ಸೊಕ್ಕು, ಅಹಂಕಾರ
* ಪರಿ – ರೀತಿ, ಕ್ರಮ

**ವ್ಯಾಕರಣ ಮಾಹಿತಿ:– ಗುಣ ವಿಶೇಷಣ**

ನಾಮ ಪದದ ವಿಶೇಷ ಗುಣವನ್ನು ತಿಳಿಸುವ ಅಥವಾ ಸೂಚಿಸುವ ಪದವೇ ಗುಣ ವಿಶೇಷಣ.

**ಉದಾ:–** ಕಾಂಚನ <u>ಸುಂದರ</u> ಹುಡುಗಿ.
ದರ್ಶಿನಿ <u>ಕೆಂಪು</u> ಲಂಗ ತೊಟ್ಟಿದ್ದಾಳೆ.
ರಾಘುವಿನ ಹತ್ತಿರ <u>ದೊಡ್ಡ</u> ವಿಮಾನವಿದೆ.

ಇಲ್ಲಿ ಅಡಿಗೆರೆ ಎಳೆಯಲಾದ ಸುಂದರ, ಕೆಂಪು, ದೊಡ್ಡ ಈ ಪದಗಳು ಬಣ್ಣ ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ ವಿಶೇಷಣ ಸೂಚಕ ಪದಗಳಾಗಿವೆ, ಇವುಗಳನ್ನು ಗುಣ ವಿಶೇಷಣಗಳೆನ್ನುವರು.

**ಅ) ಪದ್ಯದಲ್ಲಿನ ಪದಗಳನ್ನು ಹಿರಿಯರಿಂದ ಉಕ್ತಲೇಖನ ಪಡೆದು ಬರೆಯಿರಿ:**

1. ______________ 4. ______________
2. ______________ 5. ______________
3. ______________ 6. ______________

**ಆ) ಪದ್ಯದ ಸಾಲನ್ನು ನೋಡಿ ಬರೆಯಿರಿ:**

1. ಇತರರನ್ನು ನಿಂದಿಸಬೇಡ

______________________________

2. ಹಲವು ಚಿಂತೆಯಲ್ಲಿ ಇರುವವರನ್ನು ಕಂಡೆನು.

______________________________

3. ಸಂತೆಯ ಒಳಗೆ ಮನೆಯ ಮಾಡಿ ಶಬ್ಧಕ್ಕೆ ನಾಚಿಕೆ ಪಟ್ಟಿಕೊಳ್ಳಬಾರದು

______________________________

4. ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದನೆಗಳು ಬರುತ್ತವೆ.

______________________________

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

ತರಗತಿ– 5. **ಅಭ್ಯಾಸದ ಹಾಳೆ–2 ಪುನರ್ಬಲನ ಚಟುವಟಿಕೆಗಳು** ವಿಷಯ – ಕನ್ನಡ,

**ಪಾಠ: 3. ವಚನಗಳು**

**ಅ) ಹೊಂದಿಸಿ ಬರೆಯಿರಿ:**

1. ಕಳಬೇಡ, ಕೊಲಬೇಡ – ಮೃಗಗಳಿಗಂಜಿದಡೆಂತಯ್ಯಾ
2. ಬಡತನಕೆ ಉಂಬುವ ಚಿಂತೆ – ಅನ್ಯರಿಗೆ ಅಸಹ್ಯ ಪಡಬೇಡ
3. ಬೆಟ್ಟದ ಮೇಲೊಂದು ಮನೆಯ ಮಾಡಿ – ಉಣಲಾದರೆ ಉಡುವ ಚಿಂತೆ
4. ದೃಢವಿಲ್ಲದ ಭಕ್ತಿ – ಹುಸಿಯ ನುಡಿಯಲು ಬೇಡ
5. ಮುನಿಯ ಬೇಡ – ಒಡೆದ ಕುಂಭದಲಿ ಸುಜಲವ ತುಂಬಿದಂತೆ

**ಆ) ಸ್ವಂತ ವಾಕ್ಯ ರಚಿಸಿ:**

1. **ಕೇಡು** – ______________________________
2. **ನಾಚಿಕೆ** – ______________________________
3. **ಶೃಂಗಾರ** – ______________________________

**ಇ) ಮಾದರಿಯಂತೆ ಪದ ರಚಿಸಿ:**

**ಮಾದರಿ:** ವಚನ – ನಗರ – ರವಿ – ವಿನೋದ

1. **ಸಂಗಮ**–__________ __________ __________
2. **ಅಂಬಿಗ** – __________ __________ __________
3. **ಸುಜಲ** – __________ __________ __________

**ಈ) ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ:**

1. ಉಂಬುವ ಬಡತನಕೆ ಚಿಂತೆ

______________________________

2. ಸ್ತುತಿ ನಿಂದೆಗಳು ಹುಟ್ಟಿದ ಬರುತ್ತವೆ ಬಳಿಕ ಲೋಕದೊಳಗೆ

______________________________

3. ಕೂಡಲ ಸಂಗಮದೇವ ಅಂಕಿತನಾಮ ಬಸವಣ್ಣನವರ

______________________________

4. ಪಡಬಾರದು ನೋಡಿ ಅಸಹ್ಯ ಅನ್ಯರನು

______________________________

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

**ಪರ್ಯಾಯ ಶೈಕ್ಷಣಿಕ ಕ್ರಿಯಾ ಯೋಜನೆ**

ತರಗತಿ– 5. **ಅಭ್ಯಾಸದ ಹಾಳೆ–3 ಮೌಲ್ಯಮಾಪನ ಚಟುವಟಿಕೆ** ವಿಷಯ – ಕನ್ನಡ,

**ಪಾಠ: 3. ವಚನಗಳು**

**ಅ) ವಚನಗಳನ್ನು ಪೂರ್ಣಗೊಳಿಸಿ:**

1. ಕಳಬೇಡ, ಕೊಲಬೇಡ, ____________________
____________________, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ____________________
____________________; ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮ ____________________

**ಆ) ಜೋಡಿಸಿ ಬರೆಯಿರಿ:**

1. ಉಡಲು + ಆದರೆ = ____________________
2.ಲೋಕದ + ಒಳಗೆ = ____________________
3. ನಡೆ + ಇಲ್ಲದ = ____________________

**ಇ) ಹೊಂದಿಸಿ ಬರೆಯಿರಿ:**

1. ಬಸವಣ್ಣ – ಅ) ಮಾರಯ್ಯ ಪ್ರಿಯ ಅಮರೇಶ್ವರಲಿಂಗ 1. ____________________
2. ಅಂಬಿಗರ ಚೌಡಯ್ಯ – ಆ) ಚೆನ್ನಮಲ್ಲಿಕಾರ್ಜುನ 2. ____________________
3. ಅಕ್ಕಮಹಾದೇವಿ – ಇ) ಅಂಬಿಗರ ಚೌಡಯ್ಯ 3. ____________________
4. ಆಯ್ದಕ್ಕಿ ಲಕ್ಕಮ್ಮ – ಈ) ಕೂಡಲ ಸಂಗಮದೇವಾ 4. ____________________

**ಈ) ಕೆಳಗಿನ ಕೋಷ್ಟಕದ ಸಹಾಯದಿಂದ ಗುಣ ವಿಶೇಷಣವಿರುವ ವಾಕ್ಯ ರಚಿಸಿ ಗುಣ ವಿಶೇಷಣಕ್ಕೆ ಅಡಿಗೆರೆ ಹಾಕಿ:**

| | | |
|---|---|---|
| ರಾಗಿಣಿ | ತುಂಟ | ಮನುಷ್ಯ |
| ಅವನು | ಸುಂದರ | ಮಗಳು |
| ರಹೀಮ | ಹಿರಿಯ | ಹುಡುಗ |
| ಜಾನಕಿ | ಒಳ್ಳೆಯ | ಗಾಯಕ |
| ಜೋಸೆಫ್ | ಒಬ್ಬ | ಹುಡುಗಿ |

**ಮಾದರಿ** : ರಾಗಿಣಿ <u>ಸುಂದರ</u> ಹುಡುಗಿ.
1. ____________________
2. ____________________
3. ____________________
4. ____________________

**ಉ) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:**

1. ಯಾರನ್ನು ಹಳಿಯಬಾರದು?
____________________
2. ಬಸವಣ್ಣನವರು ಎಲ್ಲಿ ಜನಿಸಿದರು?
____________________
3. ಲೋಕದಲ್ಲಿ ಸ್ತುತಿನಿಂದೆಗಳು ಬಂದರೆ ಹೇಗಿರಬೇಕು?
____________________
4. ಯಾರನ್ನು ನೋಡಿ ಅಸಹ್ಯ ಪಡಬಾರದು?
____________________
5. ಎಂತಹ ಭಕ್ತಿಯಿಂದ ದ್ರವ್ಯದ ಕೇಡಾಗುತ್ತದೆ?
____________________

ಊ) **ಯೋಜನೆ: ವಚನಾಕಾರರ ಭಾವಚಿತ್ರ ಸಂಗ್ರಹಿಸಿ ಹೆಸರು, ಅಂಕಿತನಾಮ ಬರೆಯಿರಿ.**

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು

DIET CHIKMAGALORE

* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

## ಪ್ರಾಂಶುಪಾಲರು, ಡಯಟ್ ಹಾಗೂ ಉಪನಿರ್ದೇಶಕರು(ಅಭಿವೃದ್ಧಿ)ರವರ ಕಾರ್ಯಾಲಯ–ಚಿಕ್ಕಮಗಳೂರು

### ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ

ತರಗತಿ– 5. **ಅಭ್ಯಾಸದ ಹಾಳೆ–1 ಕಲಿಕಾಂಶ ಚಟುವಟಿಕೆ** ವಿಷಯ – ಕನ್ನಡ.

**ಪಾಠ: 2. ನದಿಯ ಆಳಲು**

**ಪಾಠ: 4. ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ**

ನದಿಯ ಆಳಲು ಭಾಗ–1 ನದಿಯ ಆಳಲು ಭಾಗ–2 ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ

**ಸೂಚನೆಗಳು:**
* ಪಠ್ಯಪುಸ್ತಕದಲ್ಲಿರುವ ಪಠ್ಯ/ ಪದ್ಯಭಾಗವನ್ನು ಸ್ಪಷ್ಟವಾಗಿ ಓದುವುದು.
* ಹೊಸ ಪದಗಳನ್ನು ಅರ್ಥವನ್ನು ಅರ್ಥೈಸಿಕೊಳ್ಳುವುದು.
* ಮಗು ಪೋಷಕರೊಂದಿಗೆ ಗದ್ಯದ ಸಂಭಾಷಣೆ ನಡೆಸಿ ನಾಟಕ/ ಕಥಾರೂಪದಲ್ಲಿ ಹೇಳುವುದು.
* ನೀರಿನ ಸಂರಕ್ಷಣೆ ಕುರಿತು ಚಿಕ್ಕ ಪ್ರಬಂಧ ಬರೆಯಲು ಪ್ರೇರೆಪಿಸುವುದು.
* ಪಠ್ಯದ ವ್ಯಾಕರಣ ಮಾಹಿತಿ (ಒತ್ತಕ್ಷರ, ಸಂಧಿ ಪರಿಚಯ) ಮಾಡಿಕೊಳ್ಳುವುದು.
* ಪದ್ಯವನ್ನು ರಾಗವಾಗಿ ಹಾಡಿ ರೆಕಾರ್ಡ್ ಮಾಡಿ ವಾಟ್ಸಾಪ್ ಮೂಲಕ ಕಳುಹಿಸುವುದು.
* ಸಂವೇದ, ದೀಕ್ಷಾ ಆಪ್, ಯೂಟ್ಯೂಬ್ ಕ್ಯೂ.ಆರ್. ಕೋಡ್/ ಲಿಂಕ್ ಬಳಸಿ ಈ ಗದ್ಯಭಾಗದ ಸಾರಾಂಶವನ್ನು ಅರ್ಥೈಸಿಕೊಳ್ಳುವುದು.

**ಹೊಸ ಪದಗಳ ಅರ್ಥ:**

ಆಸರ – ಆಶ್ರಯ, ನೆಲೆ  ಉಸಿರಬೇಕು – ಹೇಳಬೇಕು  ಹೊಟ್ಟೆಗನ್ನ – ಹಸಿವಿಗೆ ಆಹಾರ

ನೇಸರ – ಸೂರ್ಯ  ಬರ್ರಿ – ಬನ್ನಿರಿ  ಸಂಗಡ – ಜೊತೆ

**ಸಂಧಿ ಪರಿಚಯ:**

ನಾವು ಮಾತನಾಡುವಾಗ ಕೆಲವು ಶಬ್ದಗಳನ್ನು ಬಿಡಿಬಿಡಿಯಾಗಿ ಹೇಳುವುದಿಲ್ಲ. ಅವನು + ಅಲ್ಲಿ ಎಂಬ ಎರಡು ಶಬ್ದಗಳನ್ನು ಕೂಡಿಸಿ 'ಅವನಲ್ಲಿ' ಎಂದು ಹೇಳುತ್ತೇವೆ. ಅಂದರೆ ಅವುಗಳನ್ನು ಕೂಡಿಸಿಯೇ ಹೇಳುತ್ತೇವೆ.

**ಉದಾ :** ಆಡು + ಇಸು = ಆಡಿಸುಮರ + ಅನ್ನು = ಮರವನ್ನು

ದೇವರು + ಇಗೆ = ದೇವರಿಗೆ ಮಳೆ + ಕಾಲ = ಮಳೆಗಾಲ

ಹೀಗೆ ಎರಡು ಅಕ್ಷರಗಳು ಯಾವ ಕಾಲವಿಳಂಬವೂ ಇಲ್ಲದೆ ಪರಸ್ಪರ ಸೇರುವುದಕ್ಕೆ 'ಸಂಧಿ' ಎನ್ನುವರು.

| ಪದ | ಪದ | ಸಂಧಿರೂಪ |
|---|---|---|
| ಅವನ + | ಅಂಗಡಿ | = ಅವನಂಗಡಿ |
| ಕುಲ + | ಅನ್ನು | = ಕುಲವನ್ನು |
| ಬೆಟ್ಟ + | ತಾವರೆ | = ಬೆಟ್ಟದಾವರೆ |
| ಮಳೆ + | ಕಾಲ | = ಮಳೆಗಾಲ |

**ಮಾರ್ಗದರ್ಶನ:** * ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪಠ್ಯ/ ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.
* ವ್ಯಾಕರಣಾಂಶದ ಹೆಚ್ಚಿನ ಮಾಹಿತಿಗಾಗಿ ಅಭ್ಯಾಸ ಪುಸ್ತಕವನ್ನು ಬಳಸುವುದು.

DIET CHIKMAGALORE

## ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ

ತರಗತಿ– 5. **ಅಭ್ಯಾಸದ ಹಾಳೆ–2 ಪುನರ್ಬಲನ ಚಟುವಟಿಕೆಗಳು** ವಿಷಯ – ಕನ್ನಡ.

**ಪಾಠ: 2. ನದಿಯ ಆಳಲು ಪಾಠ: 4. ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ**

**ಅ) ಪದಗಳಿಗೆ ಅರ್ಥ ಬರೆಯಿರಿ:**

1) ಅಂತರ್ಧಾನ – ____________
2) ತಾಕೀತು – ____________
3) ಆಸರೆ – ____________
4) ನೇಸರ – ____________

**ಆ) ಪದ್ಯವನ್ನು ಪೂರ್ಣಗೊಳಿಸಿ ಕಂಠಪಾಠ ಮಾಡಿ:**

1. ಎಲ್ಲೆಲ್ಲು____________
____________
____________
____________ ಸಂಗಡ


2. ಮೈಯ____________
____________
____________
____________ ನೇಸರ.

**ಇ) ಈ ಪದ್ಯದ ಕವಿ ಪರಿಚಯ ಮಾಡಿ: (ಚಂದ್ರಶೇಖರ ಪಾಟೀಲ)**


* ಸಂಕ್ಷಿಪ್ತ ನಾಮ – ____________
*ಕಾಲ – ____________
* ಸ್ಥಳ – ____________
* ಕೃತಿಗಳು – ____________


**ಉ) ಕೆಳಗೆ ಕೊಟ್ಟಿರುವ ಕಥೆಯನ್ನು ಓದಿ ಕಥೆಯಲ್ಲಿರುವ ಒತ್ತಾಕ್ಷರಗಳನ್ನು ಬರೆಯಿರಿ:**

ಒಂದು ಸಂಜೆ ಗಂಗಾನದಿಯ ದಡದೆಯ ಮೇಲೆ ನಾಲ್ಕಾರು ಮಕ್ಕಳು ನಿಂತಿದ್ದರು. ಅವರು ನದಿಯನ್ನು ದಾಟಿ ಊರು ಸೇರಬೇಕಾಗಿದ್ದು, ಅಷ್ಟರಲ್ಲಿ ದೋಣಿಯೊಂದು ಅಲ್ಲಿಗೆ ಬಂದಿತು. ಮಕ್ಕಳು ದೋಣಿ ಎಂದರು ಅದು ಹೊರಟಿತು, ಬಾಲಕನೊಬ್ಬನು ಮಾತ್ರ ದೋಣಿ ಏರಲಿಲ್ಲ. ದೋಣಿಯವರಿಗೆ ಕೊಡುವಷ್ಟು ಹಣ ಅವನಲ್ಲಿ ಇರಲಿಲ್ಲ. ಮತ್ತೊಬ್ಬರನ್ನು ಕೇಳಿ ಹಣ ಪಡೆಯುವುದು ಅವನಿಗೆ ಹಿಡಿಸಲಿಲ್ಲ. ನದಿ ತುಂಬಿ ಹರಿಯುತಿತ್ತು. ಕತ್ತಲಾಗುತ್ತ ಬಂದಿತು, ಆದರೆ ಬಾಲಕ ಸ್ವಲ್ಪವೂ ಅಂಜಲಿಲ್ಲ. ಧೈರ್ಯವಾಗಿ ನೀರಿನಲ್ಲಿ ಧುಮುಕಿದನು. ಈಜಿ ದಡ ಸೇರಿದನು. ಆ ಧೀರ ಬಾಲಕನೇ ಲಾಲ್ ಬಹದ್ದೂರ್ ಶಾಸ್ತ್ರಿ. ಲಾಲ್ ಬಹದ್ದೂರ್ ಶಾಸ್ತ್ರಿ ಮುಂದೆ ಈ ದೇಶದ ಪ್ರಧಾನ ಮಂತ್ರಿಯಾದರು.




ಇಲ್ಲಿರುವ ಒತ್ತಕ್ಷರಗಳನ್ನು ವಿಂಗಡಿಸಿ ಬರೆಯಿರಿ (5 ಸಜಾತಿ ಒತ್ತಕ್ಷರ) (5 ವಿಜಾತಿ ಒತ್ತಕ್ಷರ)




DIET CHIKMAGALORE

**ಊ. ಹೊಂದಿಸಿ ಬರೆಯಿರಿ:**

1. ನಿಲ್ + ತಾಣ – ಚಳಿಗಾಲ ________
2. ಹೊಸ+ ಕನ್ನಡ – ಹುಲ್ಲುಗಾವಲು ________
3. ಹುಲ್ಲು + ಕಾವಲು – ಹೊಸಗನ್ನಡ ________
4. ಚಳಿ + ಕಾಲ – ನಿಲ್ದಾಣ ________

| **ಊ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ:** | **ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ:** |
| --- | --- |
| ಮಾದರಿ:– ಅವನಂಗಡಿ– ಅವನ+ಅಂಗಡಿ | ಮಾದರಿ:–ಆಡು+ಇಸು=ಆಡಿಸು |
| | ಉತ್ತರಪದ + ಪೂರ್ವಪದ = ಸಂಧಿಕ್ರಿಯೆ |
| 1. ಊರಿನಿಂದ = ________________ | 1. ಬೆಟ್ಟ + ತಾವರೆ = ________ |
| 2. ಕುಲವನ್ನು = ________________ | ______ ______ ________ |
| 3. ಮಾತನ್ನು = ________________ | 2. ಮಳೆ + ಕಾಲ = ________ |
| | ______ ______ ________ |
| 4. ದೇವರಿಗೆ = ________________ | 3. ಮರ + ಅನ್ನು = ________ |
| | ______ ______ ________ |

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

**ತರಗತಿ– 5.** **ಅಭ್ಯಾಸದ ಹಾಳೆ–3 ಮೌಲ್ಯಮಾಪನ ಚಟುವಟಿಕೆ** **ವಿಷಯ – ಕನ್ನಡ.**

**ಪಾಠ: 2. ನದಿಯ ಆಳಲು ಪಾಠ: 4. ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ**

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:**

1) ಯಾರಿಗೆ ಮಾಲಿನ್ಯದ ಸೋಂಕು ತಗುಲಿತು?

______________________________

2) ನದಿ ಮಧ್ಯದಿಂದ ಯಾರು ಧುತ್ತನೆ ಪ್ರತ್ಯಕ್ಷಳಾದಳು?

______________________________

3) ಜಲದೇವತೆ, 'ನನಗಾಗಿ ನೀವೇನು ಮಾಡಬಲ್ಲಿರಿ?' ಎಂದು ನಿನ್ನ ಬಳಿ ಕೇಳಿದರೆ ನಿನ್ನ ಉತ್ತರವೇನು?

______________________________

______________________________

**ಆ) ಕೊಟ್ಟಿರುವ ಪದಗಳಲ್ಲಿ ಸರಿಯಾದ ಉತ್ತರ ಆರಿಸಿ ಬರೆಯಿರಿ:**

1. ಮಲಿನ ನದಿಯು ಮನುಷ್ಯರ ಜೀವಕ್ಕೆ __________

(ಉಪಕಾರಿ, ಸಹಕಾರಿ, ಅಪಾಯಕಾರಿ, ಆರೋಗ್ಯಕಾರಿ)

2. ನನ್ನ ಮೇಲಾಗುತ್ತಿರುವ ಮನುಷ್ಯರ ____________ ಸಂಪೂರ್ಣವಾಗಿ ನಿಲ್ಲಬೇಕು.

(ಸೌಜನ್ಯ, ಕಾರುಣ್ಯ, ಪ್ರೀತಿ, ದೌರ್ಜನ್ಯ)

**ಇ) ನೀರಿನ ಸಂರಕ್ಷಣೆ ಕುರಿತು ನಿನ್ನ ಮಾತುಗಳಲ್ಲಿ ಚಿಕ್ಕ ಪ್ರಬಂಧ ಬರೆಯಿರಿ:**

ಉ) **ಯೋಜನೆ:**

1. ಕನ್ನಡ ನಾಡು, ನುಡಿ ಕುರಿತು ಹಾಡು/ ಕವನಗಳನ್ನು ಹಾಡಿ ರೆಕಾರ್ಡ್ ಮಾಡಿ ವಾಟ್ಸಪ್ ಮೂಲಕ ಕಳುಹಿಸಿ.
2. ನದಿಗಳ ಮಾಲಿನ್ಯವನ್ನು ತಡೆಗಟ್ಟುವ ಅಂಶಗಳನ್ನು ಪಟ್ಟಿಮಾಡಿ.
3. ದಿನನಿತ್ಯ ನಾವು ಮಾತನಾಡುವ 10 ಸಜಾತಿ ಹಾಗೂ ವಿಜಾತಿ ಒತ್ತಕ್ಷರಗಳನ್ನು ಬರೆಯಿರಿ.

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

## ಪ್ರಾಂಶುಪಾಲರು, ಡಯಟ್ ಹಾಗೂ ಉಪನಿರ್ದೇಶಕರು(ಅಭಿವೃದ್ಧಿ)ರವರ ಕಾರ್ಯಾಲಯ–ಚಿಕ್ಕಮಗಳೂರು

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

ತರಗತಿ– 5. **ಅಭ್ಯಾಸದ ಹಾಳೆ–1 ಕಲಿಕಾಂಶ ಚಟುವಟಿಕೆ** ವಿಷಯ – ಕನ್ನಡ.

**ಪಾಠ: 1. ಹುತ್ತರಿ ಹಾಡು**

ಹುತ್ತರಿ ಹಾಡುಭಾಗ–1 ಹುತ್ತರಿ ಹಾಡುಭಾಗ–2

**ಸೂಚನೆಗಳು:**
* ಪದ್ಯವನ್ನು ತಪ್ಪಿಲ್ಲದೆ ಸ್ಪಷ್ಟವಾಗಿ ಓದಿ, ಹಾಡುವುದು.
* ಪದ್ಯಭಾಗದ ಪದಗಳನ್ನು ಅರ್ಥ ಮಾಡಿಕೊಳ್ಳುವುದು.
* ಹೊಸ ಪದಗಳ ಅರ್ಥವನ್ನು ಶಬ್ಧ ಕೋಶದಲ್ಲಿ ಹುಡುಕಿ ಓದಿ ಅರ್ಥಮಾಡಿಕೊಳ್ಳುವುದು.
* ಪದ್ಯವನ್ನು ಸ್ವಂತ ರಾಗದಲ್ಲಿ ಹಿರಿಯರ ಎದುರು ಹಾಡಲು ಪ್ರಯತ್ನಿಸುವುದು.
* ಕವಿ, ಕೃತಿ ಪರಿಚಯವನ್ನು ಅರ್ಥೈಸಿಕೊಂಡು ಹೇಳುವುದು.
* ದೇಶಕ್ಕಾಗಿ ಹೋರಾಡಿದ ಕೊಡಗಿನ ವೀರರ ಜೀವನ ಚರಿತ್ರೆ ಹಾಗೂ ಕೊಡಗಿನ ಪ್ರಸಿದ್ಧ ಹುತ್ತರಿ ಹಬ್ಬ ಹಾಗೂ ಕೊಡಗಿನ ರಮಣಿಯತೆಯ ಬಗ್ಗೆ ತಮ್ಮದೇ ಆದ ಶೈಲಿಯಲ್ಲಿ ಮಾತನಾಡುವುದು.
* ನೀಡಿರುವ ಕ್ಯೂ.ಆರ್.ಕೋಡ್/ ಲಿಂಕ್‌ನಲ್ಲಿ ಈಗಾಗಲೇ ಹಾಡಿರುವ ಪದ್ಯವನ್ನು ಆಲಿಸುವುದು.

**ಪದಗಳ ಅರ್ಥ:**

ಒಡಲ್ – ಶರೀರ ದೇಹ
ಕಡುಗಲಿ – ಮಹಾಶೂರ
ಕ್ಷಾತ್ರ – ಕ್ಷತ್ರಿಯ ಕುಲ, ಕ್ಷತ್ರಿಯನ ತೇಜಸ್ಸು
ಜಮ್ಮದು – ಅರಸನು ಇನಾಮಾಗಿ ಕೊಟ್ಟ ಭೂಮಿ
ದಟ್ಟಿ ಕುಪ್ಪಸ – ಸೊಂಟಕ್ಕೆ ಕಟ್ಟುವ ವಸ್ತ್ರ
ಬಗ್ಗ – ಹುಲಿ, ವ್ಯಾಘ್ರ
ಬಿಮ್ಮನೆ – ವೇಗವಾಗಿ, ಸುಮ್ಮನೆ
ಹುತ್ತರಿ – ಕೊಡಗು ಹೊಸ ಅಕ್ಕಿಯನ್ನು ಮನೆಗೆ ತರುವಾಗ ಆಚರಿಸುವ ಹಬ್ಬ, ಕೊಡಗಿನ ಸುಗ್ಗಿ ಹಬ್ಬ.

**ಪಠ್ಯ ಪುಸ್ತಕದಲ್ಲಿರುವ ಕೃತಿಕಾರರ ಪರಿಚಯವನ್ನು ಓದಿ ಬರೆಯಿರಿ:**

**ಶ್ರೀ ಪಂಜೆ ಮಂಗೇಶರಾವ್ :** " ಕವಿಶಿಷ್ಯ" ಎಂಬ ಕಾವ್ಯ ನಾಮದಿಂದ _ _ _ _ _ _ _ _ _ _ _ _ _ _ _ _ _
_ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _
_ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _
_ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _
_ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ ಅಧ್ಯಕ್ಷರಾಗಿದ್ದರು.

**ಗುಣಿತಾಕ್ಷರಗಳು "ಕ, ಕಾ, _ _ _ _ _ _ _ _ _ _ ಕಃ" ಇದರ ಸಂರಚನೆಯನ್ನು ಮಾದರಿಯಂತೆ ಹೇಳುತ್ತಾ ಬರೆಯಿರಿ.**

**ಉದಾ:** ಕ್+ಅ=ಕ, ಕ್+ಆ=ಕಾ, _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _
_ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _
_ _ _ _

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.
* ವ್ಯಾಕರಣಾಂಶವನ್ನು ಅಭ್ಯಾಸ ಪುಸ್ತಕದ ಸಹಾಯದಿಂದ ಓದಿ ಬರೆಯಲು ತಿಳಿಸುವುದು.

DIET CHIKMAGALORE

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

ತರಗತಿ– 5. **ಅಭ್ಯಾಸದ ಹಾಳೆ–2 ಪುನರ್ಬಲನ ಚಟುವಟಿಕೆಗಳು** ವಿಷಯ – ಕನ್ನಡ

## ಪಾಠ: 1. ಹುತ್ತರಿ ಹಾಡು

**ಅ) ಹುತ್ತರಿ ಹಾಡು ಪದ್ಯವನ್ನು ಸ್ಪಷ್ಟ ಉಚ್ಚಾರಣೆಯೊಂದಿಗೆ ರಾಗಬದ್ಧವಾಗಿ ಹೇಳಿಕೊಂಡು ನೋಟ್ ಪುಸ್ತಕದಲ್ಲಿ ಬರೆಯಿರಿ:**

________________________________________
________________________________________
________________________________________
________________________________________

**ಆ) ಸ್ವಂತ ವಾಕ್ಯ ರಚಿಸಿ ಓದಿ:**

1. **ಹುತ್ತರಿ** = ________________________________
2. **ಬಗ್ಗ** = ________________________________
3. **ಭೂರಮೆ** = ________________________________
4. **ಕಡುಗಲಿ** = ________________________________

**ಇ) ಮಾದರಿಯಂತೆ ಬಿಡಿಸಿ ಬರೆಯಿರಿ:**

**ಮಾದರಿ:** ಚೇತನ= ಚ್+ಏ, ತ್+ಅ, ನ್+ಅ

1) ಸಹಕಾರ = ____________________
2) ಪ್ರವಾಸ = ____________________
3) ಭಯಾನಕ = ____________________

**ಈ) ಕೆಳಗಿನ ಪದಗಳ ಅರ್ಥ ಬರೆಯಿರಿ:**

1. ಒಡಲ್ – ______________
2. ಜಮ್ಮದು – ______________
3. ಬಗ್ಗ – ______________
4. ದಟ್ಟಿ ಕುಪ್ಪಸ – ______________
5. ಹುತ್ತರಿ – ______________
6. ಬಿಮ್ಮನೆ – ______________

**ಉ) ಈ ಕೆಳಗಿನ ಪದ್ಯ ಭಾಗವನ್ನು ರಾಗ ಬದ್ದವಾಗಿ ಹೇಳುತ್ತಾ ಬರೆಯಿರಿ:**

ಎಲ್ಲಿ ಭೂರಮೆ _ _ _ _ _ _ _ _
_ _ _ _ _ _ _ _ _ _ _ _ _ _
_ _ _ _ _ _ _ _ _ _ _ _ _ _
_ _ _ _ _ _ _ _ ಕಳೆವಳೋ?

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡು
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು..

DIET CHIKMAGALORE

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

ತರಗತಿ– 5. **ಅಭ್ಯಾಸದ ಹಾಳೆ–3 ಮೌಲ್ಯಮಾಪನ ಚಟುವಟಿಕೆ** ವಿಷಯ – ಕನ್ನಡ.

## ಪಾಠ: 1. ಹುತ್ತರಿ ಹಾಡು

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಕಾವೇರಿಯ ತವರುಮನೆ ಯಾವುದು?

______________________________

2. ಕಾವೇರಿಯು ಹೇಗೆ ಹೊಳೆಯುತ್ತಾಳೆ?

______________________________

3. ಹುತ್ತರಿ ಹಬ್ಬದ ವಿಶೇಷತೆ ಬಗ್ಗೆ ಹೇಳುತ್ತಾ ಬರೆಯಿರಿ.

______________________________

4. ಕೊಡವರ ವೇಷಭೂಷಣಗಳ ಬಗ್ಗೆ ಹೇಳುತ್ತಾ ಬರೆಯಿರಿ.

______________________________

**ಆ) ಕೆಳಗಿನ ಗುಣಿತಾಕ್ಷರಗಳನ್ನು ಕೂಡಿಸಿ ಬರೆಯಿರಿ:**

1. ಚ್+ಅ, + ಳ್+ಅ, + ವ್+ಅ, + ಳ್+ಇ = ____________
2. ಹ್+ಇ, + ಮ್+ಆ, + ಲ್+ಅ, + ಯ್+ಅ = ____________
3. ರ್+ಅ, + ಹ್+ಅ, + ದ್+ಆ, + ರ್+ಇ = ____________

**ಇ) ಹುತ್ತರಿ ಹಬ್ಬದ ವಿಶೇಷತೆ ಬಗ್ಗೆ ಹಿರಿಯರ ಸಹಾಯದಿಂದ ಟಿಪ್ಪಣಿ ಬರೆಯಿರಿ:**

______________________________

______________________________

______________________________

______________________________

______________________________

______________________________

______________________________

ಈ) ನೀನು ನೋಡಿದ/ ಅನುಭವಿಸಿದ/ ಕೇಳಿದ ಘಟನೆಗಳ ಬಗ್ಗೆ ಹಿರಿಯರ ಸಮ್ಮುಖದಲ್ಲಿ ನಿರರ್ಗಳವಾಗಿ ಮಾತನಾಡಿ.

ಉ) ದೇಶ ಭಕ್ತಿ ಗೀತೆಗಳನ್ನು ಸಂಗ್ರಹಿಸಿ ರಾಗಬದ್ಧವಾಗಿ ಹಾಡಿ.

ಊ) ಹಿರಿಯರ ಸಹಾಯದಿಂದ ಕೊಡವರಂತೆ ವೇಷ ಭೂಷಣವನ್ನು ಧರಿಸಿ.

ಋ) ಹಿರಿಯರೊಂದಿಗೆ ಕೊಡಗಿನ ಸೌಂದರ್ಯ ಹಾಗೂ ಕೊಡವರ ದೇಶ ಭಕ್ತಿಯ ಬಗ್ಗೆ ಚರ್ಚಿಸಿ.

ಎ) “ಕವಿಶಿಷ್ಯ” ಶ್ರೀ ಪಂಜೆ ಮಂಗೇಶರಾವ್ ರವರ ಬಗ್ಗೆ 4/5 ವಾಕ್ಯಗಳಲ್ಲಿ ಹೇಳಿ.

ಏ) ಕೊಡವರ ಹಾಗೂ ಕೊಡಗಿನ ವಿಶೇಷತೆಯ ಬಗ್ಗೆ ನಿಮ್ಮದೇ ಆದ ಶೈಲಿಯಲ್ಲಿ ನಿರರ್ಗಳವಾಗಿ ಮಾತನಾಡಿ.

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

ತರಗತಿ– 5. **ಅಭ್ಯಾಸದ ಹಾಳೆ–1 ಕಲಿಕಾಂಶ ಚಟುವಟಿಕೆ** ವಿಷಯ – ಕನ್ನಡ.

## ಪಾಠ: 5. ಪಂಜರಶಾಲೆ

**ಸೂಚನೆಗಳು:**

- **ಪಂಜರಶಾಲೆ** ಗದ್ಯಭಾಗವನ್ನು ತಪ್ಪಿಲ್ಲದೆ ಸ್ಪಷ್ಟವಾಗಿ ಓದಿ ಅರ್ಥ ಮಾಡಿಕೊಳ್ಳುವುದು.
- ನಾಟಕವನ್ನು ಕಥಾ ರೂಪದಲ್ಲಿ ಹೇಳಲು ಪ್ರಯತ್ನಿಸುವುದು.
- ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸುವುದು.
- ವಿಭಕ್ತಿ ಪ್ರತ್ಯಯಗಳನ್ನು ಅರ್ಥಮಾಡಿಕೊಳ್ಳುವುದು.
- ಹೊಸ ಪದಗಳ ಅರ್ಥವನ್ನು ತಿಳಿಯುವುದು.
- ಇತರ ಮಾಧ್ಯಮಗಳಲ್ಲಿ ಪ್ರಸಾರವಾಗುವ ನಾಟಕಗಳನ್ನು ಆಲಿಸುವುದು.
- ಲೇಖಕರ ಪರಿಚಯವನ್ನು ತಿಳಿದುಕೊಳ್ಳುವುದು.
- ಸಂವೇದ, ದೀಕ್ಷಾ ಆಪ್, ಯೂಟ್ಯೂಬ್ ಕ್ಯೂ.ಆರ್. ಕೋಡ್/ ಲಿಂಕ್ ಬಳಸಿ ಈ ಗದ್ಯಭಾಗದ ಸಾರಾಂಶವನ್ನು ಅರ್ಥೈಸಿಕೊಳ್ಳುವುದು.

**ಅ) ವಿಭಕ್ತಿ ಪ್ರತ್ಯಯ:**

ವಾಕ್ಯ ರಚನೆಯ ಸಂದರ್ಭದಲ್ಲಿ ನಾಮಪ್ರಕೃತಿಗಳು ಪಡೆಯಬೇಕಾದ ಅರ್ಥ ವಿಶೇಷಗಳನ್ನು ತಂದು ಕೊಡಲು ಸಹಾಯ ಮಾಡುವ ಕಾರಕಗಳೇ ಪ್ರತ್ಯಯಗಳು. ಇವುಗಳನ್ನು ವಿಭಕ್ತಿ ಪ್ರತ್ಯಯವೆಂದೂ ಕರೆಯುತ್ತಾರೆ. ‘ಮನೆ’ ಎಂಬುದು ನಾಮಪದದ ಮೂಲ ರೂಪ. ಇದನ್ನು ನಾಮಪ್ರಕೃತಿ ಎನ್ನುವರು. ಈ ನಾಮಪ್ರಕೃತಿಗೆ ಪ್ರತ್ಯಯಗಳು ಸೇರಿದಾಗ ‘ಪದ’ ಆಗುತ್ತದೆ.

ಉದಾ : ಮನೆ + ಉ = ಮನೆಯು, ಮನೆ + ಅಲ್ಲಿ = ಮನೆಯಲ್ಲಿ

| | | | |
|---|---|---|---|
| 1. ಪ್ರಥಮಾ | ಉ | ರಾಜ | ರಾಜನು |
| 2. ದ್ವಿತೀಯಾ | ಅನ್ನು | ರಾಜ | ರಾಜನನ್ನು |
| 3. ತೃತೀಯಾ | ಇಂದ | ರಾಜ | ರಾಜನಿಂದ |
| 4. ಚತುರ್ಥೀ | ಗೆ, ಇಗೆ, ಕ್ಕೆ | ರಾಜ | ರಾಜನಿಗೆ |
| 5. ಪಂಚಮೀ | ದೆಸೆಯಿಂದ | ರಾಜ | ರಾಜನ ದೆಸೆಯಿಂದ |
| 6. ಷಷ್ಠೀ | ಅ | ರಾಜ | ರಾಜನ |
| 7. ಸಪ್ತಮೀ | ಅಲ್ಲಿ | ರಾಜ | ರಾಜನಲ್ಲಿ |

**ಆ) ಸಮನಾರ್ಥಕ ಪದ ಬರೆಯಿರಿ:**

1. **ಖಗ** – ಹಕ್ಕಿ, ಪಕ್ಷಿ,
2. **ಮೃಗ** – ________________________

**ಇ) ಸ್ವಂತ ವಾಕ್ಯ ರಚಿಸಿ:**

1. **ಸಂತೋಷ** :________________________________________
2. **ಆಶ್ಚರ್ಯ** :________________________________________
3. **ರಕ್ಷಣೆ** :________________________________________
4. **ಆಸಕ್ತಿ** :________________________________________

**ಮಾರ್ಗದರ್ಶನ:** *ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪಠ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

ತರಗತಿ– 5. **ಅಭ್ಯಾಸದ ಹಾಳೆ–2 ಪುನರ್ಬಲನ ಚಟುವಟಿಕೆಗಳು** ವಿಷಯ – ಕನ್ನಡ.

## ಪಾಠ: 5. ಪಂಜರಶಾಲೆ

**ಅ) ಇವು ಯಾವ ವಿಭಕ್ತಿಗೆ ಸೇರಿದೆ? ಆ ವಿಭಕ್ತಿ ಪ್ರತ್ಯಯಗಳು ಯಾವುವೆಂಬುದನ್ನು ಬರೆಯಿರಿ:**

| ಕ್ರ.ಸಂ | ಮಾದರಿ | ವಿಭಕ್ತಿ | ಪ್ರತ್ಯಯ |
|---|---|---|---|
| ಉದಾ: | ಕೋಗಿಲೆಯು ಕೂಗುತ್ತಿದೆ | ಪ್ರಥಮ | ಉ |
| 1 | ದೇವರಲ್ಲಿ ಭಕ್ತಿ ಇಡು | | |
| 2 | ಸೀತೆಯು ಹಾಡನ್ನು ಹಾಡಿದಳು | | |
| 3 | ಮರದಿಂದ ಎಲೆಗಳು ಉದುರಿದವು | | |
| 4 | ಮಗುವಿಗೆ ಸಿಹಿ ಇಷ್ಟ | | |
| 5 | ಕೋಪವನ್ನು ಶಾಂತಿಯಿಂದ ಗೆಲ್ಲಬೇಕು | | |

**ಆ) ಸೂಕ್ತವಾದ ಪದವನ್ನು ಆರಿಸಿ ಬಿಟ್ಟ ಸ್ಥಳಗಳನ್ನು ತುಂಬಿರಿ:**

1. ಆಕಾಶದಲ್ಲಿ ____________ಹಾರುತ್ತಿದೆ (ಹಕ್ಕಿ, ಅಕ್ಕಿ)
2. ____________ಹುಲ್ಲನ್ನು ಮೇಯುತ್ತಿದೆ. (ಅಸು, ಹಸು)
3. ಸಮಯವನ್ನು ____________ಮಾಡಬಾರದು. (ಆಳು, ಹಾಳು)

**ಇ) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:**

1. ಗಿಳಿಮರಿಯು ಏನನ್ನು ತಿನ್ನಲು ತನ್ನ ಬಳಗವನ್ನು ಕರೆಯಿತು?
ಉ:____________
2. ರಾಜನು ಗಿಳಿಮರಿಯನ್ನು ಯಾವ ಶಾಲೆಗೆ ಸೇರಿಸಲು ಆದೇಶ ಮಾಡಿದನು?
ಉ:____________
3. ರಾಜನು ಯಾರನ್ನು ಶುಕಶಿಕ್ಷಣದ ಮಂತ್ರಿಯನ್ನಾಗಿ ನೇಮಿಸಿದನು?
ಉ:____________

**ಈ) ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ:**

1.ಮನೆ + ಅನ್ನು =____________
2.ಶಾಲೆ + ಅನ್ನು =____________
3.ಮನೆ + ಇಂದ =____________
4.ಮನೆ + ಅಲ್ಲಿ =____________

**ಉ) ಖಾಲಿ ಜಾಗವನ್ನು ಸೂಕ್ತವಾದ ಪದಗಳಿಂದ ತುಂಬಿರಿ:**

1. ಬನ್ನಿ ಬನ್ನಿ ____________ ತಿನ್ನಿ, ಬೇಗ ಹಾರಿ ಬನ್ನಿ.
2. ಈ ಅಸಭ್ಯ ____________ಯನ್ನು ರಾಜ ಶಾಲೆಗೆ ಸೇರಿಸತಕ್ಕದ್ದು.
3. ಅಳಿಯರಾಜ ಇಂದಿನಿಂದ ನೀನು ____________ ದ ಮಂತ್ರಿ.
4. ಒಂದು ಪಕ್ಷಿಯ ____________ದಲ್ಲೂ ರಾಜನ ಆಸಕ್ತಿ ಎಷ್ಟಿದೆ ಎನ್ನುವುದು ತಿಳಿಯುತ್ತದೆ.

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪಠ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

ತರಗತಿ– 5. **ಅಭ್ಯಾಸದ ಹಾಳೆ–3ಮೌಲ್ಯಮಾಪನ ಚಟುವಟಿಕೆ** ವಿಷಯ – ಕನ್ನಡ.

**ಪಾಠ: 5. ಪಂಜರಶಾಲೆ**

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:**

1. ನಿನಗೆ ತಿಳಿದಿರುವ ನಾಟಕಗಳ ಹೆಸರುಗಳನ್ನು ಪಟ್ಟಿಮಾಡು.

2. ಅಂಕಿತ ನಾಮ ಎಂದರೇನು? ಎರಡು ಉದಾಹರಣೆ ಕೊಡು.

3. ವಿಭಕ್ತಿ ಪ್ರತ್ಯಯಗಳ ಹೆಸರುಗಳನ್ನು ಬರೆ.

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ: (2–3 ವಾಕ್ಯಗಳಲ್ಲಿ)**

1. ಗಿಳಿಮರಿಯ ಬಗೆಗೆ ಮಂತ್ರಿಯು ರಾಜನಿಗೆ ಏನು ಹೇಳಿದನು?

2. ಮಂತ್ರಿಯು ರಾಜನ ಅಳಿಯನ ಬಗೆಗೆ ಹೇಳಿದ ಮಾತುಗಳಾವುವು?

**ಇ) ಟಿಪ್ಪಣಿ ಬರೆ:**

1. ಬಿ.ವಿ.ಕಾರಂತ:

2. ಪಂಜರ ಶಾಲೆ ನಾಟಕವನ್ನು ಕಥಾರೂಪದಲ್ಲಿ ಬರೆಯಿರಿ. **(ಹೆಚ್ಚುವರಿ ಜಾಗಕ್ಕೆ ನೋಟ್ ಪುಸ್ತಕ ಬಳಸಿ)**

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪಠ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE